MVC No.1021/2022
PW-1 ಯಶವಂತ್
Date: 05.12.2024

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

**ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.**

ಪರಶುರಾಂಪುರ ಪೊಲೀಸ್?ಠಾಣಾ ಪ್ರಕರಣ ಸಂಖ್ಯೆ 115/2022 ರ ಪ್ರ.ವ.ವರದಿಯ, ದೂರಿನ, ಪಿಎಫ್ ಪಟ್ಟಿಯ, ರೋಜಾನಾಮೆಯ ದೃಡಿಕರಿಸಿದ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ರಿಂದ 4 ಎಂದು ಗುರುತಿಸಲಾಯಿತು. ಸದರಿ ಪ್ರಕರಣದ ದೋಷಾರೋಪಣ ಪಟ್ಟಿಯ, ಗಾಯದ ಪ್ರಮಾಣ ಪತ್ರದ, ವಾಹನ ತಪಸಣಾ ವರದಿಯ, ಸ್ಥಳ ಪಂಚನಾಮೆಯ ದೃಡಿಕರಿಸಿದ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 5 ರಿಂದ 8 ಎಂದು ಗುರುತಿಸಲಾಯಿತು. ಎಸ್ ಎಸ್ ಆಸ್ಪತ್ರೆಯ ಎರಡು ಡಿಸ್ ಚಾರ್ಜು ಕಾರ್ಡುಗಳನ್ನು ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು. ಸಾಕ್ಷಿಯ ಅಂಗನ್ಯೂನತ ಪ್ರಮಾಣ ಪತ್ರವನ್ನು ನಿಪಿ 11 ಎಂದು ಗುರುತಿಸಲಾಯಿತು. 4 ಕ್ಷ ಕಿರಣ ಚಿತ್ರಗಳನ್ನು ಅದಕ್ಕೆ ಸಂಬಂದಿಸಿದ ವರದಿಯನ್ನು ಹಾಜರುಪಡಿಸುವ ಷರತ್ತಿಗೆ ಒಳಪಟ್ಟು ಅದನ್ನು ನಿಪಿ 12 ಎಂದು ಗುರುತಿಸಲಾಯಿತು. 98 ವೈದ್ಯಕೀಯ ಬಿಲ್ ಗಳನ್ನು ಒಟ್ಟಾಗಿ ನಿಪಿ 13 ಎಂದು ಗುರುತಿಸಲಾಯಿತು. 65 ವೈದ್ಯಕೀಯ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ 14 ಎಂದು ಗುರುತಿಸಲಾಯಿತು. 5 ಪೊಟೊಗಳನ್ನು ಒಟ್ಟಾಗಿ ನಿಪಿ 15 ಎಂದು ಗುರುತಿಸಲಾಯಿತು ಮತ್ತು ಅದಕ್ಕೆ ಸಂಬಂದಿಸಿದ ಸಿಡಿಯನ್ನು ನಿಪಿ 16 ಎಂದು ಗುರುತಿಸಲಾಯಿತು.

**(ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು). ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಚಳ್ಳಕೆರೆ.